B.I.E.T. LIBRARY

ವಿಜಯ ಕರ್ನಾಟಕ
19/8/24

# ಬಿಐಇಟಿಗೆ ರಾಜ್ಯಮಟ್ಟದ ಪ್ರಶಸ್ತಿ

**ದಾವಣಗೆರೆ:** ಇತ್ತೀಚೆಗೆ ರಾಜ್ಯ ವಿಜ್ಞಾನ ಪರಿಷತ್ ಕಲ್ಬುರ್ಗಿಯ ಶರಣಬಸವ ವಿಶ್ವವಿದ್ಯಾಲಯದಲ್ಲಿ ನಡೆಸಿದ ರಾಜ್ಯ ಮಟ್ಟದ 47ನೇ ಸಾಲಿನ ವಿದ್ಯಾರ್ಥಿ ಯೋಜನೆ ಕಾರ್ಯಕ್ರಮದಲ್ಲಿ ನಗರದ ಬಿಐಇಟಿ ಕಾಲೇಜಿಗೆ 'ವರ್ಷದ ಅತ್ಯುತ್ತಮ ಯೋಜನೆ' ಪ್ರಶಸ್ತಿ ಲಭಿಸಿದೆ. ಕಾರ್ಯಕ್ರಮದಲ್ಲಿ ನಾನಾ ಎಂಜಿನಿಯರಿಂಗ್ ಕಾಲೇಜುಗಳಿಂದ ಸುಮಾರು 354 ಯೋಜನೆಗಳು ಪ್ರದರ್ಶಿತಗೊಂಡಿದ್ದವು. ಇವುಗಳಲ್ಲಿ 48 ಯೋಜನೆಗಳು ವರ್ಷದ ಅತ್ಯುತ್ತಮ ಯೋಜನೆ ಪ್ರಶಸ್ತಿಗೆ ಆಯ್ಕೆಯಾಗಿದ್ದವು. ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ನಾನಾ ವಿಭಾಗಗಳಿಂದ ಒಟ್ಟು ಐದು ಯೋಜನೆಗಳನ್ನು ಪ್ರದರ್ಶಿಸಲಾಗಿತ್ತು. ಇವುಗಳಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ 'ಅಂತರ್ಜಾಲ ಬಳಸಿಕೊಂಡು ಕ್ಷೇತ್ರ ನಿಗಾ ವ್ಯವಸ್ಥೆಯನ್ನು ಹೊಂದಿರುವ ಕೃಷಿ ಉಪಯುಕ್ತ ವಾಹನ' ಯೋಜನೆಗೆ ವರ್ಷದ ಅತ್ಯುತ್ತಮ ಪ್ರಶಸ್ತಿ ದೊರೆತಿದೆ.

ವಿದ್ಯಾರ್ಥಿಗಳಾದ ಸೂರಜ್ ಪ್ರಕಾಶ್ ಕಡೂರ್, ಪ್ರಿಯಾಂಕ ನಿಂಗಪ್ಪ, ಸಹನಾ ರಮೇಶ ಮೇಟಿ, ಸ್ನೇಹ, ರಮೇಶ ಸೊರಟೂರು ಅವರು ಡಾ. ಶಿವಕುಮಾರಸ್ವಾಮಿ ಮಾರ್ಗದರ್ಶನದಲ್ಲಿ ಪ್ರಾಜೆಕ್ಟ್ ತಯಾರಿಸಿದ್ದರು. ಪ್ರಾಂಶುಪಾಲ ಡಾ. ಎಚ್.ಬಿ ಅರವಿಂದ್, ನಿರ್ದೇಶಕ ಪ್ರೊ. ವೈ.ವೃಷಭೇಂದ್ರಪ್ಪ ಮತ್ತು ಆಡಳಿತ ಮಂಡಳಿಯವರು ಸನ್ಮಾನಿಸಿದರು.

